**Date:22.01.2026**
Petr : TVJ
R.1 to R7 : CP
For orders

**ಮಧ್ಯಂತರ ಅರ್ಜಿ 4 ರ ಮೇಲೆ ಆದೇಶ**

ಅರ್ಜಿದಾರ ಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ಮಧ್ಯಂತರ ಅರ್ಜಿ 4 ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ 16 ನಿಯಮ 6 ಸಹ ಕಲಂ 151 ರಡಿಯಲ್ಲಿ ಅರ್ಜಿ ಪ್ರಮಾಣ ಪತ್ರ ಸಲ್ಲಿಸಿ, ಅರ್ಜಿಯಲ್ಲಿ ನಮೂದಿಸಿರುವ 1 ರಿಂದ 6 ದಾಖಲಾತಿಗಳು 2 ನೇ ಎದುರುದಾರರ ಬಳಿ ಇದ್ದು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿರ್ದೇಶನ ನೀಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಸದರಿ ಅರ್ಜಿಗೆ 2 ನೇ ಎದುರುದಾರ ಪರ ವಕೀಲರು ತಕರಾರು ಸಲ್ಲಿಸಿ ಸದರಿ ದಾಖಲಾತಿಗಳು ಚನ್ನಪಟ್ಟಣ ಅಪರ ಸಿವಿಲ್ ನ್ಯಾಯಾಲಯದಲ್ಲಿ ಮಿಸ್ ಪಿಟಿಷನ್ ನಂ.09/2021 ನಡೆಯುತ್ತಿದ್ದು ಅದರಲ್ಲಿ ಹಾಜರುಪಡಿಸಲಾಗಿರುತ್ತದೆ ಅಂತ ಈ ವಿಷಯ ಅರ್ಜಿದಾರರಿಗೆ ಗೊತ್ತಿದ್ದು ಪುನಃ ಈ ಅರ್ಜಿ ಸಲ್ಲಿಸಿರುವುದರಿಂದ ಸದರಿ ಅರ್ಜಿ ವಜಾ ಮಾಡಬೇಕೆಂದು ತಕರಾರು ಸಲ್ಲಿಸಿರುತ್ತಾರೆ.

ಅರ್ಜಿ, ತಕರಾರು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆಃ-

1. ಅರ್ಜಿದಾರರ ಪರ ವಕೀಲರು ಮಧ್ಯಂತರ ಅರ್ಜಿ 4 ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ 16 ನಿಯಮ 6 ಸಹ ಕಲಂ 151 ರಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಬಹುದೇ ?

2. ಯಾವ ಆದೇಶ ?

ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

ಅಂಶ ನಂ.1 : ನಕಾರಾತ್ಮಕವಾಗಿ
ಅಂಶ ನಂ.2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ:

## ಕಾರಣಗಳು

**ಅಂಶ ಸಂಖ್ಯೆ 1:** ಅರ್ಜಿ, ತಕರಾರು ಪರಿಶೀಲಿಸಲಾಗಿ, ಸದರಿ 2 ನೇ ಎದುರುದಾರರು ಚನ್ನಪಟ್ಟಣ ಅಪರ ಸಿವಿಲ್ ನ್ಯಾಯಾಲಯ, ಕಿರಿಯ ವಿಭಾಗದಲ್ಲಿ ಅಸಲು ದಾವಾ ನಂ.256/2019 ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ ದಾವೆ ದಾಖಲು ಮಾಡಿದ್ದು ಸದರಿ ದಾವೆ ದಿನಾಂಕಃ12-07-2007 ರಂದು ಡಿಕ್ರಿಯಾಗಿರುತ್ತದೆ. ಡಿಕ್ರಿ ಆದ ನಂತರ ಸದರಿ 2 ನೇ ಎದುರುದಾರರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಹಾಜರುಪಡಿಸಿದಂತ ನಿಪಿ.1 ರಿಂದ 11 ದಾಖಲಾತಿಗಳನ್ನು ವಾಪಸ್ಸು ಪಡೆದುಕೊಂಡಿದ್ದರ ಬಗ್ಗೆ ದಿನಾಂಕಃ01-04-2019 ರಂದು ಸಹಿ ಮಾಡಿರುತ್ತಾರೆ. ಆ ಪ್ರಕಾರ ಸದರಿ ಮೂಲ ದಾಖಲಾತಿಗಳು 2 ನೇ ಎದುರುದಾರರ ಬಳಿ ಇರುತ್ತದೆ ಎಂಬುದರ ಬಗ್ಗೆ ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

ಹಾಗಾದರೂ ಸದರಿ ದಾಖಲಾತಿಗಳು ಎಲ್ಲಿರುತ್ತವೆ ಎಂಬುದರ ಬಗ್ಗೆ ಎದುರುದಾರರು ತಮ್ಮ ತಕರಾರಿನಲ್ಲಿ ಅರ್ಜಿದಾರರು ಸಿವಿಲ್ ನ್ಯಾಯಾಲಯ ಚನ್ನಪಟ್ಟಣದಲ್ಲಿ ಅಸಲು ದಾವಾ ನಂ.256/2019 ದಾವೆಯನ್ನು ಎದುರುದಾರರ ವಿರುದ್ಧ ದಾಖಲು ಮಾಡಿದ್ದು ಸದರಿ ದಾವೆ ಎದುರುದಾರರ ಪರವಾಗಿ ಡಿಕ್ರಿಯಾಗಿದ್ದು ಸದರಿ ಅರ್ಜಿದಾರರು ಸದರಿ ದಾವೆ ಪುನರ್ ವಿಚಾರಣೆ ಕುರಿತು ಮಾನ್ಯ ಚನ್ನಪಟ್ಟಣ ಅಪರ ಸಿವಿಲ್ ನ್ಯಾಯಾಲಯದಲ್ಲಿ ಮಿಸ್ ಪಿಟಿಷನ್ ನಂ.09/2021 ದಾಖಲು ಮಾಡಿದ್ದು ಸದರಿ ಪ್ರಕರಣ ದಿನಾಂಕಃ20-04-2022 ರಂದು ವಿಚಾರಣೆಗೆ ನಿಗಧಿಪಡಿಸಿದ್ದು, ಸದರಿ 2 ನೇ ಎದುರುದಾರರು ಪಡೆದುಕೊಂಡಂತ ಎಲ್ಲಾ ಮೂಲ ದಾಖಲಾತಿಗಳನ್ನು ಸದರಿ ಮಿಸ್ ಪ್ರಕರಣದಲ್ಲಿ ಮೂಲ ದಾಖಲಾತಿಗಳು ಇರುತ್ತವೆ ಅಂತ ಒಪ್ಪಿಕೊಂಡಿರುವುದರಿಂದ ಸದರಿ ದಾಖಲಾತಿಗಳು ಮಿಸ್ ಪಿಟಿಷನ್ ನಂ.09/2021 ಇರುತ್ತವೆ ಅಂತ ರುಜುವಾತಾಗಿರುತ್ತದೆ. ಈಗ ಈ ಪ್ರಕರಣದಲ್ಲಿ ಸದರಿ ದಾಖಲಾತಿಗಳ ಅವಶ್ಯಕತೆ ಇದೆ ಅಂತ ಹಾಗೂ ಸದರಿ ಪ್ರಕರಣ ಈಗ ವಿಚಾರಣೆ ಹಂತದಲ್ಲಿರುತ್ತದೆ ಅಂತ ತಿಳಿಸಿರುವುದರಿಂದ ಸದರಿ ಪ್ರಕರಣ ಇತ್ಯರ್ಥಪಡಿಸಲು ಅವಶ್ಯಕವಾದಂತ ದಾಖಲೆಗಳು ಇರುತ್ತದೆ ಅಂತ

ತಿಳಿಸಿರುವುದರಿಂದ ಸದರಿ ಪ್ರಕರಣ ಮುಗಿದ ನಂತರ ಸದರಿ ಎದುರುದಾರರು ಸದರಿ ದಾಖಲಾತಿಗಳನ್ನು ಹಾಜರುಪಡಿಸಬೇಕಾಗುತ್ತದೆ.

ಒಂದು ವೇಳೆ ಸದರಿ ಮಿಸ್ ಪ್ರಕರಣ ವಿಚಾರಣೆ ನಡೆಯುವುದು ತಡವಾದ್ದಲ್ಲಿ ಎರಡೂ ಪ್ರಕರಣಗಳು ಒಂದೇ ಇರುತ್ತದೆ ಅಂತ ತಕರಾರಿನಲ್ಲಿ ತಿಳಿಸಿರುವುದರಿಂದ ಸದರಿ ಪ್ರಕರಣ ಹಳೆ ಪ್ರಕರಣ ಆಗಿರುವುದರಿಂದ ಇಂತಹ ಸಂದರ್ಭದಲ್ಲಿ ಸದರಿ ಪ್ರಕರಣದಲ್ಲಿ ಹಾಜರುಪಡಿಸಿ ಸದರಿ ದಾಖಲೆಗಳನ್ನು ನಿಶಾನೆಯಾಗಿ ಗುರುತಿಸಿದ ನಂತರ ಅದರ ದೃಢೀಕೃತ ನಕಲನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿ ಪುನಃ ಮೂಲ ದಾಖಲಾತಿಗಳನ್ನು ಚನ್ನಪಟ್ಟಣದಲ್ಲಿ ಹಾಜರುಪಡಿಸಲು ಅವಕಾಶ ಇರುತ್ತದೆ ಅಥವಾ ಚನ್ನಪಟ್ಟಣ ನ್ಯಾಯಾಲಯದಲ್ಲಿ ನಡೆಯತಕ್ಕ ಪ್ರಕರಣದಲ್ಲಿ ಸದರಿ ಮೂಲ ದಾಖಲಾತಿಗಳನ್ನು ನಿಶಾನೆಯನ್ನಾಗಿ ಗುರುತಿಸಿ ಅದರ ದೃಢೀಕೃತ ನಕಲನ್ನು ಆ ನ್ಯಾಯಾಲಯದಲ್ಲಿ ಹಾಜರುಪಡಿಸಿ ಮೂಲ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲು ಅವಕಾಶ ಇರುತ್ತದೆ. ಆದ್ದರಿಂದ ಉಭಯ ಪಕ್ಷಗಾರರು ಈ ರೀತಿ ವಿಚಾರಣೆ ಮಾಡದೆ ಹಾಗೂ ದಾಖಲಾತಿಗಳು ನ್ಯಾಯಾಲಯದಲ್ಲಿ ಇರುತ್ತದೆ ಎನ್ನುವ ವಿಚಾರ ಉಭಯ ಪಕ್ಷಗಾರರಿಗೆ ಗೊತ್ತಿದ್ದರೂ ಸಹ ಅರ್ಜಿದಾರರು ಪುನಃ ಈ ಅರ್ಜಿ ಸಲ್ಲಿಸಿರುವುದರಿಂದ ಸದರಿ ಅರ್ಜಿ ಕಾನೂನು ಪ್ರಕಾರ ನಿಲ್ಲತಕ್ಕದ್ದಲ್ಲ. ಆದ್ದರಿಂದ ಅಂಶ ಸಂಖ್ಯೆ 1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

ಅಂಶ ಸಂಖ್ಯೆ 2: ಅಂಶ ಸಂಖ್ಯೆ 1 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಃ

## ಆದೇಶ

ಅರ್ಜಿದಾರರ ಪರ ವಕೀಲರು ಮಧ್ಯಂತರ ಅರ್ಜಿ 4 ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ 16 ನಿಯಮ 6 ಸಹ ಕಲಂ 151 ರಡಿಯಲ್ಲಿ ಸಲ್ಲಿಸಿದಂತ ಅರ್ಜಿಯನ್ನು ವಜಾ ಮಾಡಲಾಯಿತು.

(ಎಂ.ಹೆಚ್. ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.